**ದಿಃ 15-11-2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** 2 ನೇ ಎದುರುದಾರರ ಪರವಾಗಿ ಶ್ರೀ ಎನ್ ಪಿ ಎನ್ ವಕೀಲರಿಂದ

ನಾನು ಈಗಲೂ ಸಹಾ ಕರ್ನಾಟಕ ರಾಜ್ಯ ವಾಲಿಬಾಲ್ ತಂಡದಲ್ಲಿ ಆಟ ಆಡುತ್ತಿದ್ದೇನೆ ಎಂದರೆ ಸಾಕ್ಷಿ 3 ವರ್ಷದ ವಿಶ್ರಾಂತಿ ನಂತರ ನಾನು ಪುನಃ ಈಗ ಕರ್ನಾಟಕ ರಾಜ್ಯ ವಾಲಿಬಾಲ್ ತಂಡದಲ್ಲಿ ಆಟ ಅಡುತ್ತಿದ್ದೇನೆ ಅಂತ ನುಡಿಯುತ್ತಾರೆ. ನಿರಂತರವಾಗಿ ಕರ್ನಾಟಕ ರಾಜ್ಯ ವಾಲಿಬಾಲ್ ತಂಡದಲ್ಲಿ ಆಟ ಆಡಿದರೆ ಮಾತ್ರ ಅವರನ್ನು ತಂಡದ ನಾಯಕತ್ವ ನೀಡುತ್ತಾರೆ ಎಂದರೆ ಸರಿ ಅಲ್ಲಾ. 71 ನೇ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್ ಶಿಪ್ ನಾನು ಕರ್ನಾಟಕ ರಾಜ್ಯ ವಾಲಿಬಾಲ್ ತಂಡದ ನಾಯಕನಾಗಿ ಪ್ರತಿದಿನಿಧಿಸಿದ್ದೇನೆ ಎಂದರೆ ಸರಿ. ನಾನು ಯಾವುದೇ ದೇಶಕ್ಕೆ ಪ್ರಯಾಣ ಮಾಡಿದ್ದಲ್ಲಿ ನನ್ನ ಪಾಸ್ ಪೋರ್ಟಿನಲ್ಲಿ ಅದು ದಾಖಲಾಗಿರುತ್ತದೆ ಎಂದರೆ ಸರಿ. ಉದ್ದೇಶಪೂರಕವಾಗಿ ನಾನು ಬೇರೆ ದೇಶದಲ್ಲಿ ವಾಲಿಬಾಲ್ ಕ್ಲಬ್ ಆಡಿದ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆ ಆಗುತ್ತದೆ ಅಂತ ಹೇಳಿ ನನ್ನ ಪಾಸ್ ಪೋರ್ಟನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲಾ. ನನ್ನ ಹೆಸರಿಲ್ಲಿ @anoop-dcosta ಎನ್ನುವ ಅಕೌಂಟ್ ಇನ್‌ಸ್ಟಾಗ್ರಾಮ್ ನಲ್ಲಿದೆ ಎಂದರೆ ಸರಿ. ಸದ್ರಿ ಇನ್‌ಸ್ಟಾಗ್ರಾಮ್‌ನಲ್ಲಿ ನಾನು ಆಡುತ್ತಿರುವಂತಹಾ ಪಂದ್ಯಗಳ ಬಗ್ಗೆ ಎಲ್ಲಾ ದಾಖಲಾತಿಗಳು ಆಗುತ್ತದೆ ಎಂದರೆ ಸರಿ. ಅದರಲ್ಲಿ ನಾನು ವಾಲಿಬಾಲ್ ಆಟ ಆಡಿದ ಬಗ್ಗೆ ಮತ್ತು ನನ್ನ ವೈಯುಕ್ತಿಕವಾದ ಜಿಮ್‌ನ ಫೋಟೋಗಳು ಮತ್ತು ಆ ಅವಧಿಯಲ್ಲಿ ಪ್ರಯಾಣ ಮಾಡಿದ ವಾಹನಗಳ ಫೋಟೋಗಳು ಸಹಾ ಅಪ್‌ಲೋಡ್ ಆಗಿದೆ ಎಂದರೆ ಸರಿ. 2017-2018 ನೇ ಸಾಲಿನಲ್ಲಿ

ನಾನು ರಾಯಲ್ ಎನ್‌ಫೀಲ್ಡ್ ಮೋಟಾರು ಸೈಕಲನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿ. ಸದ್ರಿ ವಾಹನವನ್ನು ನಾನು ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ಅದರ ಆರ್.ಸಿ ನಂಬ್ರ ನನಗೆ ನೆನಪಿಲ್ಲ. ಸಾಕ್ಷಿ ಸದ್ರಿ ವಾಹನವನ್ನು ನಾನು ಮಾರಾಟ ಮಾಡಿದ್ದೇನೆ ಅಂತ ನುಡಿಯುತ್ತಾರೆ. ಸಾಕ್ಷಿ ಮುನ್ನುಡಿದು ಸದ್ರಿ ವಾಹನವನ್ನು **2018** ಅಕ್ಟೋಬರ್ ತಿಂಗಳಿನಲ್ಲಿ ಸದ್ರಿ ವಾಹನವನ್ನು ಸುಬ್ರಹ್ಮಣ್ಯ ಕೊಠಾರಿ ರವರಿಗೆ ಮಾರಾಟ ಮಾಡಿರುವುದಾಗಿ ನುಡಿಯುತ್ತಾರೆ. ಸದ್ರಿ ಸುಬ್ರಹ್ಮಣ್ಯ ಕೊಠಾರಿ ಎನ್ನುವ ವ್ಯಕ್ತಿ ಮಂಜುನಾಥ ಕೊಠಾರಿಯವರ ಮಗ ಎಂದರೆ ಸರಿ. ದೋಷಾರೋಪಣಾ ಪತ್ರ ನಿಪಿ-**18** ರಲ್ಲಿ ಅಪಘಾತ ಆಗುವ ಸಮಯದಲ್ಲಿ ಅಪಘಾತಕ್ಕೆ ಒಳಪಟ್ಟಿದೆ ಅಂತ ಹೇಳುವ ವಾಹನವನ್ನು ಸುಬ್ರಹ್ಮಣ್ಯ ಕೊಠಾರಿ, ತಂದೆಃ ಮಂಜುನಾಥ ಕೊಠಾರಿ ಅಂತ ಕಾಣಿಸಲಾಗಿದೆ ಎಂದರೆ ಸರಿ. ಸದ್ರಿ ವ್ಯಕ್ತಿ ನನ್ನ ಸಂಬಂಧಿ ಅಲ್ಲಾ. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ಸಂತೋಷ ಶೆಟ್ಟಿ ಎನ್ನುವವರು ಫಿರ್ಯಾದಿ ಕೊಟ್ಟಿದ್ದಾರೆ ಅಂತ ತಿಳಿಯಿತು.

ಆಸ್ಪತ್ರೆಯಲ್ಲಿ ನನ್ನ ಜೊತೆಯಲ್ಲಿ ನನ್ನ ತಾಯಿ ಮತ್ತು ಸಹೋದರಿ ಅನುಮಿತ ರವರು ಇದ್ದರು ಎಂದರೆ ಸರಿ. ನನ್ನ ತಾಯಿಗೆ ನ್ಯಾಯಾಲಯದ ಕಲಾಪಗಳ ಬಗ್ಗೆ ಅನುಭವ ಇದೆ ಎಂದರೆ ಸರಿ. ಅಪಘಾತ ಆದ ನಂತರ **10** ದಿನ ನಾನು ಆಸ್ಪತ್ರೆಯಲ್ಲಿ ತುರ್ತು ನಿಗಾ (ಐಸಿಯು) ಘಟಕದಲ್ಲಿದೆ. ಅಪಘಾತ ಸ್ಥಳದಿಂದ ಆಸ್ಪತ್ರೆಗೆ ನನ್ನನ್ನು ಯಾರು ಕರೆದುಕೊಂಡು ಹೋಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಆಸ್ಪತ್ರೆಗೆ ಸಂತೋಷ ಶೆಟ್ಟಿಯವರು ಕರೆದುಕೊಂಡು ಹೋದರು ಅಂತ ನನ್ನ ಮನೆಯವರಿಂದ ಗೊತ್ತಾಯಿತು. ನನಗೆ ಅಪಘಾತ ಆದ ಸಮಯದಲ್ಲಿ ನನ್ನ ಸಂಬಂಧಿ

ಸುಬ್ರಹ್ಮಣ್ಯ ಕೊಠಾರಿ ರವರು ಸಿದ್ದಾಪುರದಲ್ಲಿದ್ದರು. ಸಾಕ್ಷಿ ನಾನು ಕುಂದಾಪುರದಿಂದ ಅವರ ಮನೆಗೆ ಹೋಗಿ ವಾಪಾಸು ಬರುವಾಗ ಅಪಘಾತ ಆಗಿದೆ ಅಂತ ನುಡಿಯುತ್ತಾರೆ. ನನಗೆ ಆಸ್ಪತ್ರೆಗೆ ಸಂತೋಷ ಶೆಟ್ಟಿಯವರು ಕರೆದುಕೊಂಡು ಹೋಗಿಲ್ಲ ನನ್ನ ಸಂಬಂಧಿ ಸುಬ್ರಹ್ಮಣ್ಯ, ತಂದೆ ಮಂಜುನಾಥ ಕೊಠಾರಿ ಇವರೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನಾನು ರಾಯಲ್ ಎನ್‌ಫೀಲ್ಡ್ ದ್ವಿಚಕ್ರ ವಾಹನವನ್ನು **2014-2015** ನೇ ಸಾಲಿನಲ್ಲಿ ಖರೀದಿ ಮಾಡಿದ್ದೇನೆ. ರಾಯಲ್ ಎನ್‌ಫೀಲ್ಡ್ ದ್ವಿಚಕ್ರ ವಾಹನವನ್ನು ಉಡುಪಿಯಲ್ಲಿರುವ ಶೋರೂಮಿನಲ್ಲಿ ಖರೀದಿ ಮಾಡಿದ್ದೇನೆ. ಸದ್ರಿ ವಾಹನ ನನ್ನ ಹೆಸರಿಲ್ಲಿದ್ದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ಸಾಕ್ಷಿ ಮುನ್ನುಡಿದು ನಾನು ವಾಹನ ಮಾರಾಟ ಮಾಡುವ ಪೂರ್ವದಲ್ಲಿ ಸದ್ರಿ ವಾಹನದ ಮಾಲೀಕತ್ವ ತನ್ನ ಹೆಸರಿನಲ್ಲಿತ್ತು ಅಂತ ನುಡಿಯುತ್ತಾರೆ. ಸದ್ರಿ ವಾಹನದ ನೊಂದಣಿ ಸಂಖ್ಯೆ ಕೆಎ**-20-1527** ಆಗಿರುತ್ತದೆ ಎಂದರೆ ಸರಿ.

ಈ ಹಂತದಲ್ಲಿ ಪಾಟೀ ಸವಾಲು ಮುಂದುವರಿಸಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**